ಹುದ್ದೆ	ಮಂಜೂರಾದ ಹುದ್ದೆ	ಭರ್ತಿ	ಖಾಲಿ
ಪ್ರಾಧ್ಯಾಪಕರು	01	–	01
ಉಪ ಪ್ರಾಧ್ಯಾಪಕರು	02	–	02
ಉಪನ್ಯಾಸಕರು	02	01	01

ಈ ವಿಭಾಗವನ್ನು ನಡೆಸಲು 3 ವೈದ್ಯರ (ಎಂಡಿ ಜನರಲ್ ಮೆಡಿಷನ್) ಸೇವೆಯನ್ನು ತೆಗೆದುಕೊಳ್ಳಲಾಗುತ್ತಿದೆ.

ಬೌರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆಗೆ ಹೃದಂಯರೋಗ ಘಟಕ ಮಂಜೂರಾಗಿರುವುದಿಲ್ಲ. ಬೌರಿಂಗ್ ಆಸ್ಪತ್ರೆಗೆ ಬಂದ ಹೃದ್ರೋಗ ರೋಗಿಗಳನ್ನು ವೈದ್ಯಶಾಸ್ತ್ರ ವಿಭಾಗದ ಬೋಧಕ ಸಿಬ್ಬಂದಿ ವರ್ಗದವರು ಪ್ರಥಮ ಚಿಕಿತ್ಸೆ ನೀಡಿ ಜಯದೇವ ಹೃದ್ರೋಗ ಆಸ್ಪತ್ರೆಗೆ ಮುಂದಿನ ಚಿಕಿತ್ಸೆಗೆ ಕಳುಹಿಸುತ್ತಿದ್ದಾರೆ.

ಆ) ಮೈಸೂರಿನ ಕೆ.ಆರ್. ಆಸ್ಪತ್ರೆಯ ಹೃದ್ರೋಗ ವಿಭಾಗದಲ್ಲಿ ಡಾ: ವಿಮಲ ಎಸ್ ಐಯಂಗಾರ್ ರವರು ದಿನಾಂಕ: 1.8.2000 ರಿಂದ ಹಾಗೂ ಡಾ: ಡಿ.ಕೆ. ಸುನೀತ ರವರು ದಿನಾಂಕ: 17.7.2002 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜಿತರಾಗಿದ್ದಾರೆ.

ಇ) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಡಾ: ವಿಮಲ ಎಸ್ ಐಯಂಗಾರ್ ಮತ್ತು ಡಾ: ಡಿ.ಕೆ. ಸುನೀತ ರವರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಿಂದ ಎರವಲು ಸೇವೆ ಮೇಲೆ ಅನುಕ್ರಮವಾಗಿ ದಿನಾಂಕ: 12.8.1998 ರಿಂದ ಹಾಗೂ 12.7.2002 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಸಾಮಾನ್ಯವಾಗಿ ಎರವಲು ಸೇವೆಯನ್ನು 3 ವರ್ಷಗಳ ಅವಧಿಗೆ ಪಡೆಯಲಾಗುತ್ತದೆ. ಅತ್ಯಾವಶ್ಯಕ ಸೇವೆ ಹಾಗೂ ರೋಗಿಗಳ ಹಿತದೃಷ್ಟಿಯಿಂದ 5 ವರ್ಷಗಳ ಅವಧಿಗೆ ಮುಂದುವರೆಸಲು ಅವಕಾಶ ಇದೆ.

ಉ) ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹೃದ್ರೋಗದ ಸ್ನಾತಕೋತ್ತರ ಕೋರ್ಸು ಇರುವುದಿಲ್ಲ. ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದ ಪ್ರಕಾರ ಪದವಿ (ಅಂಡರ್ ಗ್ರಾಜ್ಯುಯೆಟ್) ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲವಿರುವುದಿಲ್ಲ.

ಶಾಲಾ ಮಕ್ಕಳ ಸಮವಸ್ತ್ರ ಯೋಜನೆ

3557 (3286) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಶಾಲಾ ಮಕ್ಕಳ ಉಚಿತ ಸಮವಸ್ತ್ರ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಹಣ ಹಾಗೂ ಇದರಲ್ಲಿ ವಿನಿಯೋಗಿಸಿದ ಹಣವೆಷ್ಟು;

ಆ) ಬಟ್ಟೆಗಳ ಖರೀದಿ ವ್ಯವಹಾರವನ್ನು ಸರ್ಕಾರವು ಯಾವ ರೀತಿಯಾಗಿ ನಿರ್ವಹಿಸುತ್ತಿದೆ: ಹಾಗೂ ಅನುಸರಿಸುತ್ತಿರುವ ಮಾನದಂಡವೇನು;

ಇ) ಸಕಾಲದಲ್ಲಿ ಮಕ್ಕಳಿಗೆ ಸಮವಸ್ತ್ರಗಳು ವಿತರಣೆಯಾಗುತ್ತಿಲ್ಲವೆಂದು ಸರ್ಕಾರಕ್ಕೆ ದೂರುಗಳು ಬಂದಿದೆಯೇ; ಸಕಾಲದಲ್ಲಿ ತಲುಪಲು ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಅನುಸರಿಸುತ್ತಿದೆ?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ)

ವರ್ಷ	ಸರ್ಕಾರದಿಂದ ಬಿಡುಗಡೆಯಾದ ಹಣ (ರೂ.ಲಕ್ಷಗಳಲ್ಲಿ)		ವಿನಿಯೋಗಿಸಲಾದ ಹಣ (ರೂ.ಲಕ್ಷಗಳಲ್ಲಿ)	
	ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ
2000–01	3738.00	–	3738.00	–
2001–02	4515.00	400.00	4515.00	346.00
2002–03	4430.00	400.00	4430.00	350.00

ಆ) ಪ್ರತೀ ಶೈಕ್ಷಣಿಕ ವರ್ಷಕ್ಕೆ ಬೇಕಾಗುವ ಸಮವಸ್ತ್ರಗಳ ಅಂದಾಜು ಬೇಡಿಕೆಯನ್ನು ಆಯುಕ್ತರ ಕಛೇರಿಯಿಂದ ಸರ್ಕಾರಕ್ಕೆ ಸಲ್ಲಿಸಿದ ನಂತರ ಸಮವಸ್ತ್ರಗಳ ಸರಬರಾಜನ್ನು ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮಗಳಿಗೆ ಸರ್ಕಾರವು ವಹಿಸುತ್ತಾ ಬಂದಿದೆ. ಮೇಲ್ಕಂಡ ಎರಡು ಸಂಸ್ಥೆಗಳು ಸರಬರಾಜು ಮಾಡುವ ಸಮವಸ್ತ್ರಗಳ ದರವನ್ನು ಸರ್ಕಾರವು ನಿಗಧಿಪಡಿಸುತ್ತಿದೆ.

ಇ) 2000–01 ಮತ್ತು 2001–02ನೇ ಸಾಲಿನಲ್ಲಿ ನಿಗಧಿತ ದಿನಾಂಕದಿಂದ ಕ್ರಮವಾಗಿ 45 ಮತ್ತು 35 ದಿನಗಳು ತಡವಾಗಿ ಸಮವಸ್ತ್ರಗಳು ವಿತರಣೆಯಾಗಿತ್ತು. ನಂತರ 2002–03ನೇ ಸಾಲಿನಲ್ಲಿ ಸಮವಸ್ತ್ರಗಳ ಉತ್ಪಾದನಾ ಪ್ರಕ್ರಿಯೆಯನ್ನು ಮುಂಚಿತವಾಗಿ ಪ್ರಾರಂಭಿಸಲು ಸೂಕ್ತ ಏರ್ಪಾಡು ಮಾಡಿದ ನಂತರ ಸಮವಸ್ತ್ರಗಳ ಸರಬರಾಜನ್ನು ನಿಗಧಿಪಡಿಸಲಾದ ದಿನಾಂಕದೊಳಗಾಗಿ ಸರಬರಾಜಾಗುತ್ತಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಉಪಾಧ್ಯಾಯರುಗಳ ಹುದ್ದೆಗಳನ್ನು ತುಂಬುವುದು

3558 (3507) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಇರುವ ಉಪಾಧ್ಯಾಯರುಗಳ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಹಾಲಿ ಇರುವ ಹಾಗೂ ಖಾಲಿ ಇರುವ ಉಪಾಧ್ಯಾಯರ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಉಪಾಧ್ಯಾಯರ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಯಾವಾಗ ತುಂಬಲಾಗುವುದು?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು):

ಅ) ಪ್ರಾಥಮಿಕ ಶಾಲೆ 1198 ಹುದ್ದೆಗಳು
ಪ್ರೌಢಶಾಲೆ 211 ಹುದ್ದೆಗಳು

ಆ) ಪ್ರಾಥಮಿಕ ಹಾಲಿ 1167 ಖಾಲಿ 31
ಪ್ರೌಢ ಹಾಲಿ 172 ಖಾಲಿ 39

ಇ) ಖಾಲಿ ಹುದ್ದೆಗಳನ್ನು ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.